ಅಧ್ಯಕ್ಷರು.—ಯಾರು ತಮಗೆ ಕೊಟ್ಟಿದ್ದಾರೆ ಎಂದು ಹೇಳಿದರಲ್ಲ, ಅವರನ್ನು ನೀವು ಕೇಳಿ. ಎಲ್ಲಿ ಕೊಟ್ಟಿದ್ದಾರೆ ಎಂದು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಅವರು ಕೇಳಿದ ಪ್ರಶ್ನೆಗೆ ನೇರವಾಗಿ ನಾನು ಉತ್ತರ ಹೇಳಿದ್ದೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ನನಗೆ ತಿಳಿದ ಮಟ್ಟಿಗೆ ಹಣ ಬಂದಿದೆ, ಅದನ್ನು ವಿಚ್ರ್ ಮಾಡಬೇಡಿ ಎಂದು ಸಧ್ಯಕ್ಕೆ ಆದೇಶ ಬಂದಿದೆ ಎಂದು ಹೇಳಿದ್ದರು. ಅದು ನಿಜವೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಆ ರೀತಿ ಆದೇಶ ಇಲ್ಲಿಂದ ಹೋಗಿಲ್ಲ. ಹಾಸನ ಪುರಸಭೆಗೆ ಈಗ ಅರ್ಬನ್ ಮೈಕ್ರೋ ಪ್ರಾಜೆಕ್ಟ್‌ನ ಒಂದು ಯೋಜನೆ ಮತ್ತು ವೇಜಸ್ ಆಕ್ಟ್ ಹಿನ ಇದೆ. ಆ ಒಂದು ಸ್ಕೀಂಗಳಲ್ಲಿ ಅಲ್ಲಿಗೆ ಹಣ ಕೊಡುವಂತಹ ಒಂದು ತೀರ್ಮಾನ ಕೈಗೊಂಡಿದ್ದೇನೆ. ಈಗ ಅಧಿವೇಶನ ಮುಗಿದ ತಕ್ಷಣ.

ಅಧ್ಯಕ್ಷರು.—ಹಾಗಿದ್ದರೆ ಇನ್ನೂ ಹಣ ಕೊಟ್ಟಿಲ್ಲ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಇನ್ನೂ ಕೊಟ್ಟಿಲ್ಲ, ನಾವು ಕೊಡುತ್ತೇವೆ.

ಅಧ್ಯಕ್ಷರು.—ಹಾಗಿದ್ದರೆ ಸರಿ.

ಇಳಕಲ್ ಹಾಗೂ ಹುನಗುಂದ್ ನಗರಗಳ ಕುಡಿಯುವ ನೀರಿನ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ

೪೪೪ (೧೧೭೫) ಶ್ರೀ ಎಸ್. ಆರ್. ಕಾಶಪ್ಪನವರ್ (ಹುನಗುಂದ).—ಮಾನ್ಯ ಬಂದರು. ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಇಳಕಲ್ ಹಾಗೂ ಹುನಗುಂದ ಅವಳಿ ನಗರಗಳ ಕುಡಿಯುವ ನೀರಿನ ಯೋಜನೆಗಾಗಿ ಈ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ?

ಆ) ಸದರಿ ಕೆಲಸವು ಎಂದು ಪ್ರಾರಂಭಿಸಿ ಯಾವಾಗ ಮುಗಿಸಲು ಯೋಜನೆಯಾಗಿದೆ ?

ಇ) ಈ ಯೋಜನೆಯ ಕ್ಷೇತ್ರ ಹಣದ ರೂಪದಲ್ಲಿ ಇಳಕಲ್ ನಗರ ಸಭೆಯು ಸರ್ಕಾರಕ್ಕೆ ಎಷ್ಟು ಹಣ ತುಂಬಬೇಕು ಹಾಗೂ ಎಷ್ಟು ಕಂತಿನಲ್ಲಿ ತುಂಬಬೇಕು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ಸರ್ಕಾರದವರು ಒದಗಿಸಿರುವ ಆರ್ಥಿಕ ನೆರವಿನಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ೧೯೯೦-೯೧ನೇ ಸಾಲಿನಲ್ಲಿ ಆಯವ್ಯಯ ಪಟ್ಟಿಯಲ್ಲಿ ೨೫ ಲಕ್ಷ ರೂಪಾಯಿಗಳನ್ನು ಈ ಯೋಜನೆಗೆ ತೆಗೆದಿರಿಸಲಾಗಿದೆ. ಇದಲ್ಲದೆ ಬೀದರನ್ನೂ ನಿಗಮದಿಂದಲೂ ಸಾಲವನ್ನು ಪಡೆಯಲಾಗುವುದು.

ಆ) ಟೆಂಡರ್‌ಗಳನ್ನು ಕರೆಯಲಾಗಿದ್ದು ಇನ್ನೂ ೩ ತಿಂಗಳೊಳಗೆ ಗುತ್ತಿಗೆದಾರರನ್ನು ನೇಮಿಸಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗುವುದು. ಈ ಯೋಜನೆಯನ್ನು ಇನ್ನೂ ೩ ವರ್ಷಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಇ) ಇಳಕಲ್ ನಗರಸಭೆಯ ಷೇರ್ ಹಣ ೪೮ ಲಕ್ಷ ರೂಪಾಯಿಗಳಾಗಿರುತ್ತವೆ, ಒಂದು ಅಥವಾ ಎರಡು ಕಂತುಗಳಲ್ಲಿ ತುಂಬಬಹುದು.

ಶ್ರೀ ಎಸ್. ಆರ್. ಕಾಶಪ್ಪನವರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಟೆಂಡರುಗಳನ್ನು ಕರೆಯಲಾಗಿದ್ದು, ಇನ್ನು ಮೂರು ತಿಂಗಳಲ್ಲಿ ಗುತ್ತಿಗೆದಾರರನ್ನು ನೇಮಿಸುತ್ತೇವೆ ಎಂದು ಹೇಳಿದ್ದಾರೆ. ಆದರೆ ಈಗಾಗಲೇ ಟೆಂಡರ್ ಕರೆಯಲಾಗಿದೆ. ಆದರಲ್ಲಿ ಲೋಯಸ್ಟ್

ಯಾರಿದ್ದಾರೆ. ಅವರಿಗೆ ವರ್ಕ್ ಆರ್ಡರ್ ಕೊಡಬೇಕಾಗಿದೆ. ಆದರೆ ಇನ್ನೂ ಅವರಿಗೆ ವರ್ಕ್ ಆರ್ಡರ್ ಕೊಡದೆ ಇರುವುದರಿಂದ ಕೆಲಸ ತಡವಾಗುತ್ತಾ ಇದೆ. ಆದುದರಿಂದ ವರ್ಕ್‌ಆರ್ಡರ್ ಕೊಟ್ಟು ಬೇಗ ಕೆಲಸ ಪ್ರಾರಂಭಿಸಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಪೂರ್ಣ ಸಹಾನುಭೂತಿಯಿಂದ ಅವರ ಸಲಹೆಯನ್ನು ಸ್ವೀಕರಿಸಲಾಗಿದೆ.

ಮೈಸೂರಿನ ದೇವರಾಜ ಮಾರುಕಟ್ಟೆಯಲ್ಲಿ ಅಗ್ನಿ ದುರಂತದ ಪರಿಹಾರದ ಬಗ್ಗೆ

೪೯೫೫ (೧೫೮೮-ಎ) ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ).—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಮೈಸೂರಿನ ದೇವರಾಜ ಮಾರುಕಟ್ಟೆಯ ಅಗ್ನಿ ದುರಂತದಲ್ಲಿ ನಾಶವಾದ ಕಟ್ಟಡದ ಪುನರ್ ನಿರ್ಮಾಣಕ್ಕಾಗಿ ಸರ್ಕಾರವು ಮಾಡಿದ ವೆಚ್ಚವೆಷ್ಟು ?

ಆ) ಈ ದುರಂತದಲ್ಲಿ ನಷ್ಟಕ್ಕೊಳಗಾದವರಿಗೆ ನೀಡಿದ ಪರಿಹಾರಧನದ ಒಟ್ಟು ಮೊತ್ತವೆಷ್ಟು ?

ಇ) ನಷ್ಟಕ್ಕೊಳಗಾದವರೆಲ್ಲರಿಗೂ ಪರಿಹಾರ ಧನ ಸರಿಯಾಗಿ ತಲುಪಿದೆಯೇ ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಮೈಸೂರು ನಗರದಲ್ಲಿ ದೇವರಾಜ ಮಾರ್ಕೆಟ್ ಅಗ್ನಿ ದುರಂತದಲ್ಲಿ ನಾಶವಾದ ಎರಡು ಕಟ್ಟಡದ ಭಾಗದಲ್ಲಿ, ಒಂದು ಭಾಗದ ನಿರ್ಮಾಣ ಕಾರ್ಯವನ್ನು ರೂ. ೨೬.೭೦ ಲಕ್ಷ ವೆಚ್ಚದೊಂದಿಗೆ ತೆಗೆದುಕೊಳ್ಳಲಾಗಿದೆ. ಸದ್ಯಕ್ಕೆ ಇದರ ಪೂರ್ತಿ ವೆಚ್ಚವನ್ನು ನಗರಪಾಲಿಕೆಯಿಂದ ಭರಿಸಲಾಗುತ್ತಿದೆ.

ಆ) ಈ ದುರಂತದಲ್ಲಿ ನಷ್ಟಕ್ಕೊಳಗಾದ ೪೪೩ ಜನರ ಪೈಕಿ ೩೭೪ ಜನರಿಗೆ ಇದುವರೆಗೆ ರೂ. ೧,೩೬,೧೬೦-೦೦ ಗಳನ್ನು ಪಾವತಿ ಮಾಡಲಾಗಿದೆ.

ಇ) ಬಾಕಿ ಉಳಿದ ೬೯ ಜನ ನೊಂದವರಿಗೆ ರೂ, ೫೯,೮೧೦-೦೦ ಗಳನ್ನು ಪಾವತಿ ಮಾಡ ಲಾಗುತ್ತಿದೆ.

ಶ್ರೀ ಕೆ. ಹರ್ಷಕುಮಾರ ಗೌಡ.—ಸನ್ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಮೈಸೂರು ನಗರದ ದೇವರಾಜ ಮಾರ್ಕೆಟ್ ಅಗ್ನಿದುರಂತಕ್ಕೆ ಏನು ಈಡಾಯಿತು, ಆ ದುರಂತದಲ್ಲಿ ಒಂದು ಭಾಗವನ್ನು ಪುನರ್ ನಿರ್ಮಾಣ ಮಾಡುವ ಕಾರ್ಯದಲ್ಲಿ ಈಗಾಗಲೇ ಸರ್ಕಾರದವರು ೨೬.೭೦ ಲಕ್ಷ ರೂಪಾಯಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಈಗ ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಎರಡನೇ ಹಂತದ ಕಾರ್ಯಕ್ರಮವನ್ನು ಯಾವಾಗ ಪ್ರಾರಂಭಿಸುತ್ತೀರಿ. ಇಲ್ಲಿ ಎರಡನೆಯ ಪ್ರಶ್ನೆಗೆ ಈ ದುರಂತದಲ್ಲಿ ನಷ್ಟಕ್ಕೆ ಒಳಗಾದಂಥ ೪೪೩ ಜನರಲ್ಲಿ ಈಗಾಗಲೇ ೩೭೪ ಜನರಿಗೆ ಪರಿಹಾರ ಮೊತ್ತವನ್ನು ಪಾವತಿ ಮಾಡಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಇನ್ನು ೬೯ ಜನರಿಗೆ ಇಲ್ಲಿಯತನಕ ಪರಿಹಾರ ಮೊತ್ತವನ್ನು ಕೊಟ್ಟಿಲ್ಲ, ಏಕೆ ಕೊಡಲಾಗಿಲ್ಲ, ಯಾವಾಗ ಕೊಡುತ್ತೀರಿ ಎಂದು ಕೇಳಬಯಸುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಇವತ್ತು ೯ನೇ ತಾರೀಖು, ಈ ತಿಂಗಳ ಅಂತ್ಯದೊಳಗೆ ಮಿಕ್ಕವರೆಲ್ಲರಿಗೂ ನಾನು ಪಾವತಿ ಮಾಡಿಸುತ್ತೇನೆ.

ಶ್ರೀ ಕೆ. ಹರ್ಷಕುಮಾರಗೌಡ.—ದೇವರಾಜ ಮಾರುಕಟ್ಟೆಯ ನವೀಕರಣದ ಪೂರ್ಣ ಮಟ್ಟದ ಕಾರ್ಯವನ್ನು ಯಾವಾಗ ಮುಗಿಸುತ್ತೀರಿ. ಮೈಸೂರಿನ ಜನಸಾಂದ್ರತೆ ಹೆಚ್ಚಿದ್ದರೂ ಸಹ ದೇವರಾಜ ಮಾರುಕಟ್ಟೆ ಮಾತ್ರ ಒಂದೇ ಕಡೆ ಕೇಂದ್ರೀಕೃತವಾಗಿದೆ. ಇದರ ಬದಲು ಮೈಸೂರಿನ ನಾಲ್ಕು ಭಾಗಗಳಲ್ಲಿ ಮಾರುಕಟ್ಟೆಯನ್ನು ಪ್ರಾರಂಭ ಮಾಡುವಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಾಗು ತ್ತದೆಯೇ ಎಂದು ಕೇಳುತ್ತೇನೆ.